ದಕ್ಷಿಣ ಕನ್ನಡದ ಸುಳ್ಯ ತಾಲ್ಲೂಕಿನವರಾದ ಸ್ಮಿತಾ ಅಮೃತರಾಜ್ ಕಥೆ, ಕವನ ಮತ್ತು ಪ್ರಬಂಧಗಳನ್ನು ಬರೆಯುವ ಉತ್ಸಾಹಿ ಲೇಖಕಿ. 'ಕಾಲ ಕಾಯುವುದಿಲ್ಲ', 'ಅಂಗಳದಂಚಿನ ಕನವರಿಕೆಗಳು', 'ಒಂದು ವಿಳಾಸದ ಹಿಂದೆ' ಅವರ ಕೃತಿಗಳು. ಅರೆಭಾಷೆಯಲ್ಲಿಯೂ ಅವರು ಬರವಣಿಗೆ ಮಾಡಿದ್ದಾರೆ.

ಸಾಕು.' ಕಡ್ಡಿ ತುಂಡು ಮಾಡಿದಂತೆ ಗಟ್ಟಿ ಹೇಳಿ ಫೋನು ಇಟ್ಟರು.

ಮನೆಗೆ ಬರುತ್ತೇನೆ ಅಂದವರನ್ನು ಬರುವುದು ಬೇಡ ಅಂತ ಹೇಗೆ ಹೇಳುವುದು?

ನಿಜಕ್ಕೂ ನಾನು ಈಗ ಪೀಕಲಾಟಕ್ಕೆ ಸಿಕ್ಕಿ ಹಾಕಿಕೊಂಡೆ. ಈ ಭಾಷಣ ಅಂದರೆ ನನಗೆ ಭಯಂಕರ ಹೆದರಿಕೆ. ನನಗೆ ಮಾತನಾಡಲು ಬರುವುದಿಲ್ಲ ಅಂದರೂ ಯಾರೂ ಕೇಳುವುದೇ ಇಲ್ಲ. ಇವರ ಒತ್ತಾಯಕ್ಕೆ ಒಪ್ಪಿ ನಾ ಪಡುವ ಕಷ್ಟ ಯಾರ ಮುಂದೆ ಹೇಳಿಕೊಳ್ಳುವುದು? ಐದನೇ ತರಗತಿಯಿಂದ ಹೀಗೆ ಯಾರದೋ ಒತ್ತಾಯಕ್ಕೆಲ್ಲ ಮಣಿದು ಭಾಷಣಕ್ಕೆ ಒಪ್ಪಿಕೊಂಡು ಸ್ವಲ್ಪ ಹೆಚ್ಚೇ ನಿದ್ರಾಪ್ರಿಯಳಾದ ನಾನು ಹಗಲು ಇರುಳೂ ನಿದ್ದೆಯಿಲ್ಲದೆ ಹೊರಳಾಡಿ ಭಾಷಣ ಬಾಯಿಪಾಠ ಮಾಡಿ ಮಾಡಿ ಹೈರಾಣಾದ ಸಂಕಟವನ್ನು ಯಾರ ಮುಂದೆ ತೋಡಿಕೊಳ್ಳಲಿ?

ಮಕ್ಕಳ ದಿನಾಚರಣೆಗೆ, ರಾಜ್ಯೋತ್ಸವಕ್ಕೆ, ಗಾಂಧಿ ಜಯಂತಿಗೆ ಮೂರು ನಾಲ್ಕು ದಿನ ಉಂಟು ಅನ್ನುವಾಗ ಕ್ಲಾಸ್ ಟೀಚರ್‌ದು ಬುಲಾವ್ ಬರುತ್ತದೆ, 'ಸ್ಮಿತಾ, ನೀನು ನಾಡಿದ್ದು ಭಾಷಣಕ್ಕೆ ತಯಾರಿ ಮಾಡಿ ಬರಬೇಕು.' ಮನೆಗೆ ಹೋಗಿ ದುಂಬಾಲು ಬೀಳುತ್ತೇನೆ. ನಾನು ಅಜ್ಜಿ ಮನೇಲಿ ಓದುತ್ತಿದ್ದ ಕಾರಣ ಭಾಷಣ ಬರೆದು ಕೊಡಲಿಕ್ಕೆ ಮಾವನೊಟ್ಟಿಗೆ ಹೇಳಬೇಕಷ್ಟೆ. ವಯಸ್ಸಿನಲ್ಲಿ ತುಂಬಾ ದೊಡ್ಡವರಲ್ಲದ್ದಕ್ಕೋ, ತೀರಾ ಹತ್ತಿರದ ಸಂಬಂಧಿಯಾದ್ದಕ್ಕೋ ಏನೋ ಮಾವನನ್ನು ಏಕವಚನದಲ್ಲಿ ಕರೆಯುವುದು ರೂಢಿ. ಕಾಲೇಜಿಗೆ ಹೋಗುತ್ತಿರುವ ಮಾವನೋ ಪರಶುರಾಮನ ವಂಶಜ. ಯಾವಾಗಲೂ ಸಡಾಸುಡು ಅನ್ನುತ್ತಾ ತೊಂಬತ್ತು ಡಿಗ್ರಿಯಲ್ಲೇ ಇರುತ್ತಾನೆ, ಅಥವಾ ನಂಗೆ ಹಾಗೆ ಅನ್ನಿಸುತ್ತಿತ್ತೋ ಏನೋ ಗೊತ್ತಿಲ್ಲ. ಓದುಗೀದು ಬಿಟ್ಟು ಭಾಷಣ ಗೀಷಣ ಅಂತದ್ದಕ್ಕೆಲ್ಲ ಟೈಂ ಪಾಸ್ ಮಾಡುವಂಗೆ ಇಲ್ಲ. ಆ ದಿನ ಇಡೀ ಮಾವನ ಹಿಂದೆ. ಮಾವ... ಮಾವ... ಅಂತ ಕರೆಯುತ್ತಾ ಸುತ್ತಿದೆ. ಹೇಗೋ ಅಡಿಪಾಯ ಹಾಕಬೇಕಿತ್ತಲ್ಲ. ಮಾವನಿಗೆ ಸಣ್ಣ ಪುಟ್ಟ ಚಾಕರಿ ಮಾಡಿಕೊಡುತ್ತಾ ಮೆಲ್ಲಗೆ ಪೀಠಿಕೆ ಶುರು ಮಾಡಿದೆ. 'ಮಾವ, ನಂಗೆ ಭಾಷಣ ಮಾಡಲಿಕ್ಕೆ ಉಂಟು. ಟೀಚರ್ ಹೇಳಿದ್ದಾರೆ. ಮೂರು ಪುಟ ಬರೆದುಕೊಡಬೇಕಂತೆ. ಇವತ್ತೇ ಬರೆದು ಕೊಡು ಮಾವ. ಮತ್ತೆ ಎರಡೇ ದಿನ ಇರುದು. ನಾನು ಬಾಯಿಪಾಠ ಮಾಡಬೇಕಲ್ಲ?'

ಭಾಷಣ ಅಂತ ಹೇಳುವಾಗ ಮಾವನಿಗೆ ಅದಾಗಲೇ ತೊಂಬತ್ತು ಡಿಗ್ರಿ ಇದ್ದದ್ದು ನೂರಕ್ಕೆ ಏರಿ, 'ನಂಗೆ ಅದೆಲ್ಲ ಗೊತ್ತಾಗುದಿಲ್ಲ, ನೀನು ಟೀಚರ್ ಬಳಿಯೇ ಬರೆಸಿಕೋ' ಅಂತ ಹೇಳಿದಾಗ ನಂಗೆ ಅಳುವೇ ಬಂದಿತ್ತು. ಟೀಚರಿಗೆ ಬರೆಯೋಕೆ ಕಷ್ಟ ಆಗಿಯೇ ಅದರ ಹೊಣೆ ನನ್ನ ಮೇಲೆ ಹಾಕಿದ್ದು, ನಾನು ಮಾವನ ಮೇಲೆ ಹಾಕಿದ್ದು. ಇಲ್ಲಿ ಮಾವ ನೋಡಿದರೆ... ನನ್ನ ಕೊಸ ಕೊಸ ಅಳು ತಾರಕಕ್ಕೇ ಏರಿದ್ದು ಅಜ್ಜಿಗೆ ಕೇಳಿಸಿ, ವಿಷಯ ಗೊತ್ತಾಗಿ ಮಾವನಿಗೆ ಎರಡು ಬೈದು 'ಆ ಗೂಡೆಗೆ ಸ್ವಲ್ಪ ಗೊತ್ತಿರುದು ಬರ್ದು ಕೊಟ್ಟರೆ ನಿನ್ನ ಗಂಟೇನ್ ಹೋದೆ' ಅಂತ ಎರಡು ಬಿರ್ದಾಳ ಸಿಕ್ಕಿದ ಮೇಲೆ ಮಾವ ಪರಂಚಿಕೊಂಡು ಮೂರು ಹೇಳಿದ್ದು ನಾಕು ಪುಟ ಗೀಚಿ, 'ಏನಾರ್ ಮಾಡಿಕೋ... ಇನ್ನು ಮುಂದೆ ರಂಪ ಮಾಡಬೇಡ' ಅಂತ ಗದರಿ ಕಳಿಸಿದ್ದ.

ಮತ್ತೆ ಸುರುವಾಯಿತು ನೋಡಿ ನನ್ನ ಬಾಯಿಪಾಠ. ಸನ್ಮಾನ್ಯ ಸಭಾಧ್ಯಕ್ಷರೇ... ಎಂಬಲ್ಲಿಂದ ಹಿಡಿದು ಅವಕಾಶಕ್ಕಾಗಿ ವಂದನೆಗಳು... ಎಂದು ಹೇಳುವಲ್ಲಿಯವರೆಗೆ ವಟವಟಾಂತ ನಾನು ಬಾಯಿಪಾಠ ಮಾಡಬೇಕಿತ್ತು. ಯಾವುದೋ ಒಂದು ಸಾಲು ಮರೆತು ಹೋದರೆ ಇಡೀ ಬಾಷಣದ ಎಳೆಯೇ ತಪ್ಪಿ ಹೋಗಿ ಬೆಬ್ಬೆಬ್ಬೆ... ಆಗಿ ಮಾನ ಮರ್ಯಾದೆ ಹೋಗುವ ಪರಿಸ್ಥಿತಿ ಬಂದೊದಗಿ ಬಿಡುತ್ತಿತ್ತು. ಎಷ್ಟೋ ಸಾರಿ ನನ್ನ ಸಹಪಾಠಿಗಳ ಈ ಸ್ಥಿತಿಯನ್ನ ನಾನು ನೋಡಿ ಮುಸಿ